## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂಃ1023/2018**

| | | | |
|---|---|---|---|
| ಸಾಕ್ಷಿಯ ಹೆಸರು | ಃ ನಿರ್ವಾಣಯ್ಯ | **ದಿನಾಂಕ** | ಃ **05/03/2024** |
| ತಂದೆಯ ಹೆಸರು | ಃ ಮಾಳಿಗಯ್ಯ | **ಸಿ ಡಬ್ಲ್ಯೂ** | ಃ **03** |
| ವಯಸ್ಸು | ಃ **57** ವರ್ಷ | **ಪಿ ಡಬ್ಲ್ಯೂ** | ಃ **03** |
| ಉದ್ಯೋಗ | ಃ ವ್ಯವಸಾಯ | | |
| ವಿಳಾಸ | ಃ ನರಸಿನಕುಪ್ಪೆಗ್ರಾಮ | | |

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದ ಃ-**

ಚಾಸಾ 1 ನನಗೆ ಗೊತ್ತಿಲ್ಲ. ಚಾಸಾ 2 ನನ್ನ ಊರಿನವರು. ನಾನು ಆರೋಪಿಯನ್ನು ಈ ಮೊದಲು ನೋಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ, ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ನಿಪಿ 4 ಕೃತ್ಯ ಸ್ಥಳ ಮಹಜರ್ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿ ಒಪ್ಪಿದ ಕಾರಣ ಸದರಿ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 5 ಅಮಾನತು ಮಹಜರ್ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಒಪ್ಪಿದ ಕಾರಣ ಸದರಿ ಸಹಿಯನ್ನು ನಿಪಿ 5(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನಮ್ಮ ಊರಿಗೆ ಬಂದು ಸದರಿ ದಾಖಲೆಗೆ ಸಹಿ ಮಾಡುವಂತೆ ಹೇಳಿದಾಗ ನಾನು ಸಹಿ ಮಾಡಿರುತ್ತೇನೆ, ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟಿ ಸವಾಲು ಎಪಿಪಿಯವರಿಂದಃ**

ದಿಃ **19.10.2018** ರಂದು ನಾನು ಅತ್ನಿ ಉಪ್ಪಾರಕೊಪ್ಪಲು - ಬೋರನಹಳ್ಳಿ ರಸ್ತೆ ಉಪ್ಪಾರ ಕೊಪ್ಪಲು ತಿರುವಿನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ನರಸಿನಕುಪ್ಪೆ ಕಡೆಯಿಂದ ಮಧ್ಯಾಹ್ನ ಸುಮಾರು **2** ರಿಂದ **2.30** ಗಂಟೆ ಸಮಯದಲ್ಲಿ ಟಿಎನ್-**38** ಎ ಎಕ್ಸ್-**2785** ರ ಬೈಕಿನಲ್ಲಿ ಬರುತ್ತಿದ್ದು ಅದರ ಹಿಂದಿನಿಂದ ಕೆಎ-**13** ಇಎಂ-**7105** ರ ಬೈಕಿನ ಸವಾರ ಆನಂದ ಎಂಬುವವನು ತನ್ನ ಬೈಕನ್ನು

ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದ ಎಂದರೆ ಸರಿಯಲ್ಲ. ಆ ರೀತಿ ಬಂದು ಮುಂದೆ ಹೋಗುತ್ತಿದ್ದ ಟಿಎನ್ -38 ಎ ಎಕ್ಸ್ - 2785 ಬೈಕಿಗೆ ಹಿಂಬದಿಯಿಂದ ಡಿಕ್ಕಿಪಡಿಸಿದ ಎಂದರೆ ಸರಿಯಲ್ಲ. ಡಿಕ್ಕಿ ಮಾಡಿದ ಪರಿಣಾಮ ಬೈಕಿನಲ್ಲಿ ಇದ್ದವನು ಬೈಕ್ ಸಮೇತ ರಸ್ತೆ ಮೇಲೆ ಬಿದ್ದಾಗ ನಾನು ಮತ್ತು ಡಿಕ್ಕಿ ಮಾಡಿದ ಬೈಕ್ ಸವಾರ ತಕ್ಷಣ ಹೋಗಿ ನೋಡಿ ಬೈಕಿನಿಂದ ಬಿದ್ದವರಿಗೆ ಎಡ ಹಣೆ, ಎಡಗಣ್ಣಿನ ಹತ್ತಿರ, ಎಡತೋಳಿಗೆ ತರಚಿದ ಗಾಯವಾಗಿತ್ತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಅಲ್ಲಿ ಬರುತ್ತಿದ್ದ ಚಾಸಾ 2 ರವರು ಹಾಗೂ ನಾನು ಮೃತಪಟ್ಟ ವ್ಯಕ್ತಿಯನ್ನು ನೋಡಿ ಸದರಿಯವರು ನಮ್ಮ ಗ್ರಾಮದ ಸುಂದರ್ ಎಂದು ತಿಳಿಯಿತು ಎಂದರೆ ಸರಿಯಲ್ಲ. ಆಗ ನಾವು ಸುಂದರ್ ರವರ ಮನೆಗೆ ಫೋನ್ ಮಾಡಿ ವಿಚಾರವನ್ನು ತಿಳಿಸಿದೆವು ಎಂದರೆ ಸರಿಯಲ್ಲ. ನಾವು ಆಂಬುಲೆನ್ಸ್ ಗೆ ಫೋನ್ ಮಾಡಿ ಮೃತ ಸಂದರ್ ನ ಮೃತಹದೇಹವನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟೆವು ಎಂದರೆ ಸರಿಯಲ್ಲ. ನಂತರ ಸುಂದರ್ ರವರ ಹೆಂಡತಿ ಅಪಘಾತದ ಕುರಿತು ಅರಕಲಗೂಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಂತರ ದಿನಾಂಕ 20.10.2018 ರಂದು ಅರಕಲಗೂಡು ಪೊಲೀಸ್ ಠಾಣೆಯ ಪೊಲೀಸರು ಕೃತ್ಯ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೃತ್ಯ ಸ್ಥಳ ಮಹಜರನ್ನು ನನ್ನ ಹಾಗೂ ಚಾಸಾ 2 ಮತ್ತು 10 ರವರ ಸಮಕ್ಷಮ ಬೆಳಗ್ಗೆ 10 ಗಂಟೆಯಿಂದ 10.45 ಗಂಟೆಯವರೆಗೆ ಬರೆಯಲಾಯಿತು ಎಂದರೆ ಸರಿಯಲ್ಲ. ಅದೇ ದಿನ ಸಂಜೆ 4 ಗಂಟೆಯಿಂದ 4.45 ಗಂಟೆಯವರೆಗೆ ಪೊಲೀಸ್ ಠಾಣೆಯ ಆವರಣದಲ್ಲಿ ಅಮಾನತು ಮಹಜರ್ ಕ್ರಮ ಜರುಗಿಸಿ ಅಪಘಾತಪಡಿಸಿದ ಹಾಗೂ ಅಪಘಾತಕ್ಕೆ ಒಳಗಾದ ಬೈಕ್ ಗಳನ್ನು ಪೊಲೀಸರು ನನ್ನ ಹಾಗೂ ಚಾಸಾ 2 ಮತ್ತು 10 ರವರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಎಂದರೆ ದಿನಾಂಕ 20.10.2018 ರಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ " ದಿನಾಂಕ 19.10.2018 ರಂದು - - - - - ಗುರುತಿಸುವುದಾಗಿ " ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ</u> ಇಲ್ಲ ಎಂದು ನುಡಿದಿರುತ್ತಾರೆ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**